# ಉಜ್ಜೀವನ ಬರಲು ಕಾದಿರುವ ಪಟ್ಟಣ

# ಚೆನ್ನೈ



## ನುಡಿಯಲ್ಪಟ್ಟ ಪ್ರವಾದನೆ

ಕಡೆಯ ಕಾಲದಲ್ಲಿ ಉಜ್ಜೀವನವು ದಕ್ಷಿಣ ಭಾರತದಿಂದ ಎದ್ದೇಳುತ್ತದೆ ಎಂದು ವಾಗ್ದಾನ ಮಾಡಿರುವ ದೇವರು, ಹಾಗೆ ಉಂಟಾಗುವ ಆ ಉಜ್ಜೀವನವು ತೋಮನು ಸುರಿಸಿರುವ ರಕ್ತದ ನಿಮಿತ್ತ ಚೆನ್ನೈನಿಂದ ಹೊರಡುತ್ತದೆ ಎಂದು ವಾಗ್ದಾನ ಮಾಡಿದ್ದಾನೆ. ಚೆನ್ನೈಯನ್ನು ಗುರಿಮಾಡಿಕೊಂಡು ಸೈತಾನನು ಮಾಡಲು ಉದ್ದೇಶಿಸಿರುವ ತಂತ್ರಗಳ ಬಗ್ಗೆ ದೇವರು ಮಾತನಾಡಿ ತಿಳಿಸಿದಂತದ್ದು: ದುಷ್ಟತನವು ಕೆಡುಕುತನವು ನಿನ್ನಲ್ಲಿ ತುಂಬಿಕೊಂಡಿದ್ದರು, ಪಟ್ಟಣವೆ ಇಗೋ, ನಾನು ನಿನ್ನ ಬಳಿಯಿಂದ ಮಹಾ ಕಾರ್ಯವನ್ನು ಹೊರಡಿಸುವೆ. ಹೇಗೆಂದರೆ ಕಡೆಯಕಾಲದಲ್ಲಿ ನನಗಾಗಿ ಕಾರ್ಯಮಾಡಲು, ಒಂದು ಸಂತತಿಯನ್ನು ಹೆರುವ ಉಜ್ಜೀವನವು ನಿನ್ನಿಂದಲೇ ಆರಂಭಿಸಲ್ಪಡುತ್ತದೆ. ಮತ್ತೂ ದೇವರು ಮಾತನಾಡಿ: ಎಲ್ಲೂ ಇಲ್ಲದಂತಹ ಒಂದು ಮಹಾಗೊಂದಲ ಈ ಪಟ್ಟಣದಲ್ಲಿ ತುಂಬಿರುತ್ತದೆ. ಜನಾಂಗಗಳನ್ನು ಮಾರ್ಗತಪ್ಪಿಸುವದರಿಂದಲೂ, ಸುಳ್ಳುಜನರು ಎದ್ದು ನನ್ನ ಮಾತನ್ನು ಬದಲಿಸುವದರಿಂದಲೂ, ಪಟ್ಟಣದ ಮೇಲೆ ನಾನು ನೀತಿಯನ್ನು ನಡೆಸುವಂತಹ ಸನ್ನಿವೇಶವನ್ನು ಉಂಟುಮಾಡಲು ಸೈತಾನನು ಬಹು ತೀವ್ರವಾಗಿ ರಣರಂಗಕ್ಕೆ ಧುಮುಕಿದಾನೆ. ಇದರಿಂದ ಸುಳ್ಳು ಬೋಧನೆಗಳನ್ನು, ಮಿಥ್ಯ ದರ್ಶನದವರನ್ನು, ವಿನೂತನವಾದ ಸೇವಕರುಗಳನ್ನು ವೃದ್ಧಿಗೊಳಿಸಿ, ಈ ಪಟ್ಟಣದಲ್ಲಿ ಹೆಚ್ಚಿಸಿ ಇದರ ಮೇಲೆ ನನ್ನ ರೌದ್ರದ ಬಾಗಿಲನ್ನು ತೆರೆದಿರಿಸಿದ್ದಾನೆ. ಇದರ ನಿಮಿತ್ತ ಪ್ರಕೃತಿಯ ವಿಕೋಪದಿಂದಲೂ, ಮನುಷ್ಯರಿಂದ ಉಂಟಾಗುವ ಬಾಧೆಗಳಿಂದಲೂ, ಆಳ್ವಿಕೆಮಾಡುವವರಿಂದಲೂ, ಅಧಿಕಾರದಲ್ಲಿರುವವರಿಂದಲೂ ಈ ಪಟ್ಟಣದಲ್ಲಿ ಗೋಳಾಟವು, ಗೊಂದಲವು ತುಂಬಿಕೊಂಡಿರುತ್ತದೆ. ಜನರು ತಾವು ನಿಲ್ಲುವದೆಲ್ಲಿ, ಹೋಗುವದೆಲ್ಲಿ ಎಂದು ದಿಕ್ಕು ತೋಚದೆ ದೆಸೆಗೆಟ್ಟವರಾಗಿ ಅಲೆದಾಡುವರು. ತಮ್ಮ ಮೇಲೆ ಆಳ್ವಿಕೆ ಮಾಡುವವರು ಇಂಥವರೆ ಎಂದು, ನಡೆಸುವವರು ಇವರೆ ಎಂದೂ ತಿಳಿಯದಂತಹ ಗೊಂದಲವು ಹಿಡುಕೊಳ್ಳುತ್ತದೆ. ಬೀದಿಗಳಲ್ಲಿ ತಮ್ಮ ಅವಶ್ಯಕತೆಗಾಗಿ ಕೂಗಾಡುತ್ತಾ ಯಾವದೊಂದು ಸನ್ನಿವೇಶಕ್ಕೂ ಹೇಸಿಕೊಳ್ಳರು. ದುಷ್ಟರು ಬಹು ಜನರೆದ್ದು ಪಟ್ಟಣದ ರಕ್ಷಣೆಯನ್ನು ಪ್ರಶ್ನೆಗೆ ಗುರಿಮಾಡುವರು. ಕೊಲೆಗೈಯುವವರು ಎಲ್ಲಾಸ್ಥಳಗಳಲ್ಲೂ ಕೊಲೆಮಾಡುವರು, ಜನರು ಬೀದಿಗಳಲ್ಲೂ ಹತ್ಯೆಗೊಳಪಡುವರು. ಕೇಡು ತಲೆಯೆತ್ತಿ ಮುನ್ನುಗ್ಗುವರಿಂದ ಅವರ ಕಣಜಗಳು ಅವರಿಗೆ ಫಲಕೊಡುವದಿಲ್ಲ, ಅವರ ಒರತೆಗಳು ಅವರಿಗೆ ದಾಹ ತೀರಿಸೋದಿಲ್ಲ. ಹಣವು, ಆದಾಯವು ಅಪಹರಿಸಲ್ಪಡುವದರಿಂದ ಜನರು ತಮ್ಮ ಜೀವನವನ್ನು ತೊರೆದು, ದೇವರನ್ನು ಮರೆತುಹೋಗುವರು. ಪ್ರಾರ್ಥಿಸುವವನು ಎದ್ದು ಪ್ರಾರ್ಥಿಸಿದರೆ ನಾನು ಶಾಂತಸ್ಥಿತಿಯನ್ನು ಪಟ್ಟಣಕ್ಕೆ ಉಂಟುಮಾಡಿ ನನ್ನ ವಾಗ್ದಾನವನ್ನು ನೆರವೇರಿಸುವೆನು ಅಂದನು. (ನುಡಿಯಲ್ಪಟ್ಟ ದಿನ 21.03.2015)

## ಪ್ರಾರ್ಥನಾ ಮನವಿ

1. ಕಡೆಯ ಕಾಲದ ಉಜ್ಜೀವನವನ್ನು ಆರಂಭಗೊಳಿಸಲು ದೇವರು ಚೆನ್ನೈಪಟ್ಟಣವನ್ನು ಬಹು ಪ್ರಾಮುಖ್ಯವಾಗಿ ಆರಿಸಿಕೊಂಡಿದ್ದಾನೆ. ಈ ಪಟ್ಟಣದ ಸುರಕ್ಷತೆಗಾಗಿಯೂ, ದೇವರ ಉದ್ದೇಶ ಯಾವ ಕೊರತೆಯೂ ಇಲ್ಲದೆ ಇಲ್ಲಿ ನೆರವೇರುವಂತೆಯೂ ಪ್ರಾರ್ಥಿಸಿರಿ.

2. ದೇವರು ಈ ಪಟ್ಟಣವನ್ನು ಉಜ್ಜೀವನ ಆರಂಭಗೊಳಿಸುವ ಕೇಂದ್ರಬಿಂದುವನ್ನಾಗಿ ಇಟ್ಟುಕೊಂಡಿರುವದರಿಂದ, ಸೈತಾನನ ಕಣ್ಣುಗಳು ಈ ಪಟ್ಟಣದ ಮೇಲೆ ಮಹಾ ಭೀಕರವಾಗಿ ಕಾರ್ಯವೆಸುಗುತ್ತಲಿದೆ. ಅವನು ಈ ಪಟ್ಟಣಕ್ಕೆ ವಿರುದ್ಧವಾಗಿ ಮಾಡುವ ಎಲ್ಲಾ ತಂತ್ರದ ಪ್ರಯತ್ನಗಳು ಸ್ಥಗಿತಗೊಳ್ಳುವಂತೆ ಪ್ರಾರ್ಥಿಸಿರಿ.

3. ದೇವರು ತನ್ನ ರೌದ್ರದ ಬಾಗಿಲನ್ನು ತೆರೆಯಮಾಡಲು ಸೈತಾನನು ದೇವರ ದಾಸರುಗಳಿಂದಲೇ ಕಾರ್ಯನಿರ್ವಹಿಸುತ್ತಾನೆ. ಅವರನ್ನು ಮಾರ್ಗಬದಲಿಸಿ ಸುಳ್ಳುಬೋಧನೆಯನ್ನು, ಸುಳ್ಳುಪ್ರವಾದನೆಗಳನ್ನು ಇಲ್ಲಿಂದ ಹೊರಡುವಂತೆ ಮಾಡುವದರ ಮೂಲಕ ಪಟ್ಟಣದ ಮೇಲೆ ದೇವರ ರೌದ್ರವನ್ನು ಉಂಟುಮಾಡಲು ಪ್ರಯತ್ನಿಸುತ್ತಿದ್ದಾನೆ. ಇವನ ಯಾವ ತಂತ್ರಗಳು ಕೈಗೂಡದಂತೆಯೂ, ಸುಳ್ಳುಸೇವಕರು ಚೆನ್ನೈಯಲ್ಲಿ ಎದ್ದೇಳದ ಹಾಗೆಯೂ ಪ್ರಾರ್ಥಿಸಿರಿ.

4. ಪಟ್ಟಣದ ಮಧ್ಯದಲ್ಲಿ ಒಂದು ನೂತನ ವಿಧವಾದ ಕೇಡನ್ನುಂಟುಮಾಡಿ, ಜನರನ್ನು ತಡವರಿಸುವಂತೆ ಮಾಡಿ ಗೊಂದಲಕ್ಕೊಳಪಡಿಸುವನು ಎಂದು ದೇವರು ಕೆಲವು ವರ್ಷಗಳ ಹಿಂದೆ ನುಡಿದಂತದ್ದು ಇಂದಿಗೆ ನೆರವೇರುತ್ತಾ ಬರುತ್ತಿದೆ. ಈ ಸ್ಥಿತಿ ಮಾರ್ಪಡಲು ಪ್ರಾರ್ಥಿಸುವಂತೆ ಬಹುಜನರೆದ್ದು ಏಳಲು ಪ್ರಾರ್ಥಿಸಿರಿ.

5. ಪಟ್ಟಣದ ಎಲ್ಲೆಗಳನ್ನು ದೇವರು ಕಾಯುವಂತೆಯೂ, ಗೊಂದಲದ ಸನ್ನಿವೇಶದ ನಿಮಿತ್ತ ಜನರ ಎಚ್ಚರ ದೇವರ ಬಳಿಯಿಂದ ತಮ್ಮ ಜೀವನವನ್ನು ಹುಡುಕುವ ಹೋರಾಟದ ಕಡೆಗೆ ಬದಲಾಗದಂತೆಯೂ, ದೇವರು ಪಟ್ಟಣದಲ್ಲಿ ಒಂದು ಶಾಂತಿಯುತ್ತ ಸ್ಥಿತಿಯನ್ನು ಉಂಟುಮಾಡಿಕೊಡುವಂತೆಯೂ ಇದಕ್ಕಾಗಿ ಭಾರದಿಂದ ಪ್ರಾರ್ಥಿಸುವ ಮಕ್ಕಳನ್ನು ಎಬ್ಬಿಸುವಂತೆ ಅತ್ಯಾಸಕ್ತಿಯಿಂದ ಪ್ರಾರ್ಥಿಸಿರಿ. ಚೆನ್ನೈನ ಉಜ್ಜೀವನ ಎಂಬುದು ಚೆನ್ನೈಗೆ ಮಾತ್ರ ಮೀಸಲಲ್ಲ; ಅದು ಇಡೀ ಪ್ರಪಂಚಕ್ಕೆ ಮೀಸಲಾದಂತದ್ದು; ಪ್ರತಿಯೊಬ್ಬರು ಇದಕ್ಕಾಗಿ ಪ್ರಾರ್ಥಿಸಿರಿ.